Health Permits under Prohibition Act.

*Q.—525. Sri T. MADAIAH GOWDA (Ramanagaram).—

Will the Minister for Finance be pleased to state :—

(*a*) the number of persons who have obtained health permits under Section 32 of the Prohibition Act in each District of the State ;

(*b*) the number of persons who have obtained such permits in Bangalore Rural District and the quantity and the kind of liquor permitted for them ?

A.— Sri RAMAKRISHNA HEGDE (Minister for Finance).—

(*a*)—

Sl. No.	*Name of the District*	*No. of Health Permits*
1	Coorg District ...	777 permits
2	Mandya District ...	22 ,,
3	South Kanara District ...	76 ,,
4	North Kanara District ...	4 ,,
5	Bidar District ...	1 ,,
6	Chitradurga District ...	22 ,,
7	Dharwar District ...	268 ,,
8	Kolar District ...	46 ,,
9	Bijapur District ...	14 ,,
10	Shimoga District ...	35 ,,
11	Hassan District ...	92 ,,
12	Chickmagalur District ...	120 ,,
13	Mysore District ...	209 ,,
14	Bellary District ...	20 ,,
15	Belgaum District ...	87 ,,
16	Tumkur District ...	4 ,,
17	Bangalore Rural District ...	4 ,,
	Total	1,801 Permits

(*b*) *No. of persons*	*Quantity*	*Kind of liquor*
4	8 Units (at 2 units each)	Foreign liquor.

ಶ್ರೀ ಟಿ. ಮಾದಯ್ಯಗೌಡ.—ಪರ್‌ಮಿಟ್ ಕೊಡುವಾಗ ಒಬ್ಬೊಬ್ಬರಿಗೆ ಫಾರಿನ್ ಲಕ್ಕರ್ ಎಷ್ಟು ಯೂನಿಟ್ ಕೊಡಲಾಗುತ್ತದೆ ?

ಶ್ರೀ ರಾಮಕೃಷ್ಣ ಹೆಗಡೆ.—ಫಾರಿನ್ ಲಕ್ಕರ್ ಎಂದರೆ ಇಂಡಿಯನ್ ಮೇಡ್ ಫಾರಿನ್ ಲಕ್ಕರ್ ಎಂದು ಅರ್ಥ. ಇದರಲ್ಲಿ ಟಾಡಿ ಮತ್ತು ಅರಕ್ ಬರುವುದಿಲ್ಲ. ಎಷ್ಟು ಯೂನಿಟ್ ಕೊಡ ಲಾಗುತ್ತದೆ ಎಂಬುದರ ಬಗ್ಗೆ ಸರ್ಕಾರಿ ಆಜ್ಞೆಯಾಗಿದೆ. I am prepared to place a copy of that Order on the Table of the House.

ಶ್ರೀ ಟಿ. ಮಾದಯ್ಯಗೌಡ.—ಟಾಡಿ ಈ ಪರ್‌ಮಿಟ್ ಸಿಸ್ಟಮ್‌ನಲ್ಲಿ ಬರುವುದಿಲ್ಲ ಅಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲ, ಡ್ರೈ ಏರಿಯಾದಲ್ಲಿ ನಾವು ಟಾಡಿಗೆ ಪರ್‌ಮಿಟ್ ಕೊಡುತ್ತಿಲ್ಲ.

ಶ್ರೀ ಟಿ. ಮಾದಯ್ಯಗೌಡ.—ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್‌ನಲ್ಲಿ ನಾಲ್ಕು ಪರ್‌ಮಿಟ್ ಕೊಟ್ಟಿದೆಯೆಂದು ಹೇಳಿದೆ. ಇದು ರಾಮನಗರ ಮತ್ತು ಚೆನ್ನಪಟ್ಟಣಕ್ಕೆ ಮಾತ್ರ ಅನ್ವಯಿಸುತ್ತದೆಯೆ ?

Sri RAMAKRISHNA HEGDE.— Obviously it applies to dry areas in the rural district.

ಶ್ರೀ ಎಸ್. ಎಂ. ಗುರ್ರೆಡ್ಡಿ.—ತಾವು ಈ ಪರ್‌ಮಿಟ್ ಕೊಟ್ಟನಂತರ ಸರ್ಕಾರಕ್ಕೆ ಬಂದ ಹಣವೆಷ್ಟು ಎಂದು ಹೇಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಎಷ್ಟು ಎಂದು ಇಲ್ಲಿ ಹೇಳುವುದು ಕಷ್ಟವಾಗುತ್ತದೆ. ನೋಟೀಸ್ ಬೇಕು.

ಶ್ರೀ ಸಿ. ಆರ್. ರಂಗೇಗೌಡ.—1961 ರಿಂದ 1964ರವರೆಗೆ ಕೆಲವರಿಗೆ ಪರ್‌ಮಿಟ್ ಕೊಡುವುದಕ್ಕೆ ಅವಕಾಶ ಮಾಡಿದೆ. ಹೆರ್ತ್ ಪರ್ಮಿಟ್ ಪ್ರಕಾರ ಸಾಮಾನ್ಯವಾಗಿ ಹೆರಿಗೆಯಾದಮೇಲೆ ಬಾಣಂತಿಯರಿಗೆ ಇದನ್ನು ಕೊಡಲು ಬೆಂಗಳೂರು ಜಿಲ್ಲೆಯಲ್ಲಿ ಎಷ್ಟುಕಡೆ ಅವಕಾಶಮಾಡಿಕೊಟ್ಟಿದ್ದೀರಿ?

ಶ್ರೀ ರಾಮಕೃಷ್ಣ ಹೆಗಡೆ.—ಇದರಲ್ಲಿ ಗರ್ಭಿಣಿಯರಿಗೆ, ಬಾಣಂತಿಯರಿಗೆ ಎಷ್ಟು ಎಂದು ಹೇಳುವುದಕ್ಕಾಗುವುದಿಲ್ಲ. ಇಲ್ಲಿ ಒಟ್ಟು ಪರ್ಮಿಟ್ ತೆಗೆದುಕೊಂಡವರ ಸಂಖ್ಯೆಯನ್ನು ಹೇಳಿದೆ.

ಶ್ರೀ ಟಿ. ಮಾದಯ್ಯಗೌಡ.—ಪರ್ಮಿಟ್ ತೆಗೆದುಕೊಳ್ಳಬೇಕಾದರೆ ಫೀ ಕೊಟ್ಟು ಅಪ್ಲಿಕೇಷನ್ ಹಾಕಿ ತೆಗೆದುಕೊಳ್ಳಬೇಕೇ ಅಥವಾ ಬೇರೆ ತರಹದಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೆ ?

ಶ್ರೀ ರಾಮಕೃಷ್ಣ ಹೆಗಡೆ.—ಪ್ರಾಹಿಬಿಷನ್ ಆಕ್ಟ್ ಪ್ರಕಾರ ಬೇರೆ ತರಹ ಕೊಡುವುದಕ್ಕೆ ಸಾಧ್ಯವಿಲ್ಲ. ಎಲ್ಲೆಲ್ಲ ಪಾನಪ್ರತಿಬಂಧ ಜಾರಿಯಲ್ಲಿದೆ ಅಲ್ಲಿ ಫಾರಿನ್ ಲಿಕ್ಕರನ್ನು ಪರ್ಮಿಟ್ ಇಲ್ಲದೆ ಉಪಯೋಗಿಸಬಾರದು.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಫಾರಿನ್ ಲಿಕ್ಕರ್‌ಗಿಂತ ಹೆಂಡ ಬಹಳ ಆರೋಗ್ಯವಾದುದು. ಆದಕಾರಣ ಬಡವರು ತಮ್ಮ ಕಷ್ಟ ಮರೆಯಲು ಕುಡಿಯುವುದಕ್ಕೆ ಅನುಕೂಲವಾಗುವಂತೆ ಹಳ್ಳಿಗಳಲ್ಲಿ ಹೆಂಡ ಮಾರುವುದಕ್ಕೆ ಅನುಕೂಲಮಾಡಿಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಫಾರಿನ್ ಲಿಕ್ಕರ್ ಎಂದರೆ ಹೊರ ದೇಶದಿಂದ ಬಂದ ಲಿಕ್ಕರ್ ಅಲ್ಲ. ಇಂಡಿಯಾದೇಶದಲ್ಲೆ ತಯಾರಾದುದು. ಈ ತರಹದಲ್ಲಿ ಟಾಡಿ ಅರಕ್ ಎಂದು ಹೇಳುವುದಿಲ್ಲ, ವಿಸ್ಕಿ, ಬ್ರಾಂಡಿ ಎಂದು ಹೇಳುತ್ತಾರೆ. ಹಳ್ಳಿಗಳಲ್ಲಿ ಟಾಡಿಗೆ ಪರ್ಮಿಟ್ ಕೊಡಬೇಕಾದ ವಿಷಯವನ್ನು ಗಮನಿಸುತ್ತೇವೆ.

ಶ್ರೀ ಸಿದ್ದಯ್ಯ ಕಾಶಿಮಠ್.—ಆಸ್ಪತ್ರೆಗಳಲ್ಲಿ ಕೊಡತಕ್ಕಂಥ ಮದ್ಯಕ್ಕೆ ಆಸ್ಪತ್ರೆಯ ಅಧಿಕಾರಿಗಳು-ಪರ್ಮಿಟ್ ತೆಗೆದುಕೊಳ್ಳಬೇಕೇ ?

ಶ್ರೀ ರಾಮಕೃಷ್ಣ ಹೆಗಡೆ.—ಆಸ್ಪತ್ರೆಗಳಲ್ಲಿ ಮದ್ಯ ಕೊಡುವ ವಿಚಾರ ನನಗೆ ಗೊತ್ತಿಲ್ಲ. ಪಾನಪ್ರತಿಬಂಧ ಜಾರಿಯಲ್ಲಿರುವ ಪ್ರದೇಶಗಳಲ್ಲಿರುವ ಆಸ್ಪತ್ರೆಗಳಲ್ಲಿ ಆ ರೀತಿ ಕೊಡುತ್ತಿದ್ದರೆ ಅದು ಕಾಯಿದೆಗೆ ವಿರುದ್ಧವಾಗುತ್ತದೆ.

ಶ್ರೀ ಎಸ್. ಎಂ. ಗುರ್ರೆಡ್ಡಿ.—ಹೆರ್ತ್‌ಗ್ರೌಂಡ್ಸ್ ಮೇಲೆ ಪರ್ಮಿಟ್ ಕೊಡುತ್ತೀರೋ ಅಥವಾ ಚಟವಿದ್ದವರಿಗೆಲ್ಲಾ ಕೊಡುತ್ತೀರೋ ?

ಶ್ರೀ ರಾಮಕೃಷ್ಣ ಹೆಗಡೆ.—ಚಟ ಬಹಳ ಬೆಳೆದರೆ ಅನಾರೋಗ್ಯಕ್ಕೆ ಕಾರಣವಾಗಬಹುದು. ಚಟವಿರುವವರಿಗೆಲ್ಲಾ ಪರ್ಮಿಟ್ ಕೊಡುವುದಿಲ್ಲ. ಕುಡಿಯುವುದರಿಂದ ಅವರ ಆರೋಗ್ಯದ ಮೇಲೆ ಒಳ್ಳೆಯ ಪರಿಣಾಮವಾಗುತ್ತದೆ ಎಂದು ಡಾಕ್ಟರ್‌ರವರಿಂದ ಸರ್ಟಿಫಿಕೇಟ್ ತಂದು ಕೊಟ್ಟರೆ ಪರ್ಮಿಟ್ ಕೊಡುತ್ತೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಬೇರೆಯವರ ಪರ್ಮಿಟ್ ಇಟ್ಟುಕೊಂಡು ರೀಚೇರ್ಲ್ ಅಂಗಡಿಗಳನ್ನು ನಮ್ಮ ಕಡೆ ತೆರೆದಿದ್ದಾರೆ. ಒಬ್ಬರ ಹೆಸರಿನಲ್ಲಿ ಪರ್ಮಿಟ್ ಇದ್ದರೆ ಬೇರೆಯವರ ಹೆಸರಿನಲ್ಲಿ ಮಾರುತ್ತಿರುತ್ತಾರೆ. ಇಂತಹ ಕೇಸ್‌ಗಳನ್ನು ಪೋಲಿಸಿನವರೇನಾದರೂ ಕಂಡುಹಿಡಿದಿದ್ದಾರೆಯೇ ಅಥವಾ ತಾವೇನಾದರೂ ಕಂಡುಹಿಡಿದಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಅಂತಹ ಯಾವ ಒಂದು ಕೇಸೂ ನನ್ನ ಗಮನಕ್ಕೆ ಬಂದಿಲ್ಲ. ಅಂಥ ಕೇಸೇನಾದರು ಬಂದರೆ ಕಾಯಿದೆಗನುಗುಣವಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಮಾವಯ್ಯಗೌಡ.—ಚೆನ್ನಪಟ್ಟಣ ಮತ್ತು ರಾಮನಗರಗಳೆರಡು ಮಾತ್ರ ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್‌ಗೆ ಅನ್ವಯಿಸುತ್ತದೆಯೆ, ಅಲ್ಲವೆ ಪರ್ಮಿಟ್ ಇಲ್ಲದೆ ಕುಡಿಯುವವರಿಗೆ ಕ್ರಮ ತೆಗೆದು ಕೊಂಡ ಬಗ್ಗೆ ಎಷ್ಟು ಕೇಸ್‌ಗಳು ತಮ್ಮ ಗಮನಕ್ಕೆ ಬಂದಿವೆ ?

ಶ್ರೀ ರಾಮಕೃಷ್ಣ ಹೆಗಡೆ.—ಪರ್ಮಿಟ್ ಇಲ್ಲದ ಕುಡಿಯುವುದು ಕೇವಲ ರಾಮನಗರ ಮತ್ತು ಚೆನ್ನಪಟ್ಟಣಗಳಷ್ಟೇ ಅಲ್ಲ. ಅನೇಕ ಕಡೆ ಈ ರೀತಿ ಪರ್ಮಿಟ್ ಇಲ್ಲದೆ ಕುಡಿಯುತ್ತಾರೆಂದು ಸರ್ಕಾರದ ಗಮನಕ್ಕೆ ಬಂದಿದೆ. ಹಿಡಿದ ಮೇಲೆ ಶಿಕ್ಷೆ ಮಾಡುವುದು ಬಹಳ ಕಷ್ಟ. ಯಾರಿಗೆ ಕುಡಿಯುವ ಅಭ್ಯಾಸವಿದೆಯೋ ಅವರು ಕಾಯಿದೆಗೆ ಬದ್ಧವಾಗಿ ಕುಡಿಯಬೇಕೆಂದು ಆರ್ಡರ್ ತಂದಿದ್ದೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ತಾವು ಲೈಸನ್ಸ್ ಕೊಡುವುದನ್ನು ಜಾರಿಗೆ ತಂದ ಮೇಲೆ ಕುಡಿಯುವವರ ಸಂಖ್ಯೆ ಎಷ್ಟು ಕಡಿಮೆಯಾಗಿದೆ ?

ಶ್ರೀ ರಾಮಕೃಷ್ಣ ಹೆಗಡೆ.—ಕುಡಿಯುವವರ ಸಂಖ್ಯೆ ಕಡಿಮೆಯಾಗಿದೆಯೆಂದು ಹೇಳುವುದು ಕಷ್ಟ. ಕಾಯಿದೆಗೆ ವಿರುದ್ಧವಾಗಿ ಕುಡಿಯುವವರ ಸಂಖ್ಯೆ ಕಡಿಮೆಯಾಗಿರುವುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕಾಫಿ, ಟೀ ಕುಡಿಯುವ ಅಭ್ಯಾಸವಿದೆ, ಅದೇ ರೀತಿ ಕುಡಿತ ಗಳಲ್ಲಿ ಎಷ್ಟು ವಿಧ ಇದೆ ?

Mr. SPEAKER.—The Hon. Member has a certain amount of general knowledge. Therefore, I disallow this supplementary.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಪರ್ಮಿಟ್ ಕೊಡದೆ ಇದ್ದಾಗಲೂ ಸಹ ಅನೇಕ ಜನರು ಕುಡಿಯುತ್ತಿದ್ದರು. ಈಗ ಪರ್ಮಿಟ್‌ಕೊಟ್ಟ ಮೇಲೆ ಹೆಚ್ಚು ಜನರು ಕುಡಿಯುತ್ತಿದ್ದಾರೆ. ಸರ್ಕಾರಕ್ಕೆ ಹಣದ ಅಭಾವ ಬಹಳವಿರುವುದರಿಂದ ಕುಡಿಯುವವರಿಗೆಲ್ಲಾ ಅನುಕೂಲವಾಗುವಂತೆ ಎಲ್ಲಾ ಕಡೆಯೂ ಪಾನನಿರೋಧವನ್ನು ತೆಗೆದು ಹಾಕಿದರೆ ಸರ್ಕಾರಕ್ಕೆ ಹೆಚ್ಚಿನ ಹಣ ಒರುವುದಕ್ಕೆ ಅವಕಾಶ ವಾಗುವುದಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರ ಸೂಚನೆಯನ್ನು ಸರ್ಕಾರದವರು ಗಮನಿಸುತ್ತಾರೆ.

ಶ್ರೀ ಬಿ. ಕೆ. ಪುಟ್ಟಯ್ಯ.—ಪಾನನಿರೋಧ ಶಾಸನ ಜಾರಿಯಲ್ಲಿರುವುದರಿಂದ ಕಳ್ಳಭಟ್ಟಿ ತಯಾರಾಗುತ್ತಿರುವುದು ಜಾಸ್ತಿಯಾಗುತ್ತಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಕಳ್ಳಭಟ್ಟಿ ಜಾಸ್ತಿಯಾಗುತ್ತಿದೆಯೆಂದು ಒಪ್ಪುವುದಿಲ್ಲ. ಅದನ್ನು ಒಮ್ಮೆಲೇ ತೆಗೆದು ಹಾಕುವುದು ಸರಿಯಿಲ್ಲ. ಅದಕ್ಕೆ ಜನರ ಸಹಾಯವೂ ಬೇಕು. ಜನರ ಸಹಕಾರ ವಿಲ್ಲದೆ ಸರ್ಕಾರ ಒಂದರಿಂದಲೇ ಸಂಪೂರ್ಣವಾಗಿ ಇದು ನಿರ್ನಾಮ ಆಗುವುದಿಲ್ಲ. ಈ ಒಂದು ಕ್ರಮವನ್ನು ಹೊಸದಾಗಿ ಜಾರಿಗೆ ತಂದಿರುವುದರಿಂದ ಬಹಳ ಮಟ್ಟಿಗೆ ಕಳ್ಳಭಟ್ಟಿ ಕಡಿಮೆಯಾಗುತ್ತಿದೆ ಯೆಂದು ಕಾಣುತ್ತದೆ.

ಶ್ರೀ ಸಿ. ಆರ್. ರಂಗೇಗೌಡ.—ದೇಶದಾದ್ಯಂತ 1801 ಪರ್ಮಿಟ್ ಕೊಟ್ಟಿದ್ದೀರಿ. ಅವರಲ್ಲಿ ಎಷ್ಟು ಜನ ಕಾಯಿದೆಗೆ ವಿರುದ್ಧವಾಗಿ ಕಾರ್ಯ ನಡೆಸುತ್ತಿದ್ದಾರೆ ? ಅಂತಹವರ ಪರ್ಮಿಟ್‌ಗಳನ್ನು ವಜಾ ಮಾಡಲಾಗಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ವಜಾ ಮಾಡುವ ಪ್ರಸಂಗ ಇದುವರೆಗೆ ಬಂದಿಲ್ಲ. ಅಲ್ಲದೆ ಕಾಯಿದೆಗೆ ವಿರುದ್ಧವಾಗಿ ನಡೆಸುತ್ತಿದ್ದಾರೆಂದು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಟಿ. ಕೆ. ಕಂಬ್ಳಿ.—ನೀವು ಕೊಟ್ಟಿರುವ ಲೈಸನ್ಸ್ ಪೈಕಿ ಧಾರವಾಡಕ್ಕೆ ಎರಡನೇ ಸ್ಥಾನ ಬಂದಿದೆ. ಪರ್ಮಿಟ್ ಕೊಡಲು ಪ್ರಚಾರಕ್ಕಾಗಿ ಯಾರನ್ನಾದರೂ ನೇಮಿಸಿದ್ದೀರಾ ಅಥವಾ ಲೈಸನ್ಸ್ ಕೊಡಬೇಕಾದರೆ ಯಾವ ಯಾವ ನಿಯಮಗಳನ್ನು ಅನುಸರಿಸುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಲೈಸನ್ಸ್ ಕೊಡುವುದೆಂದರೆ ಮದ್ಯವನ್ನು ಮಾರಾಟ ಮಾಡಲಿಕ್ಕೆ ಬಹುಶಃ ಮಾನ್ಯ ಸದಸ್ಯರ ಅಭಿಪ್ರಾಯ ಪರ್ಮಿಟ್ ಯಾವರೀತಿ ಕೊಡುತ್ತಾರೆಂದು ಇರಬೇಕು. ಇದಕ್ಕೆ ಸಂಬಂಧಪಟ್ಟ ಸರ್ಕಾರದ ಆಜ್ಞೆಯನ್ನು ಸಭೆಯ ಮೇಜಿನಮೇಲೆ ಇಡಲಾಗುತ್ತದೆ. ಅದರಲ್ಲಿ ಕೂಲಂಕುಷವಾಗಿ ತಿಳಿಸಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪಾನನಿರೋಧವನ್ನು ಸಡಿಲಿಸಿದಮೇಲೆ ರಾಜ್ಯದಲ್ಲಿ 1801 ಮಂದಿಗೆ ಪರ್ಮಿಟ್ ಕೊಟ್ಟಿದ್ದೀರಿ. ಇದರಲ್ಲಿ ತಪ್ಪು ಅರ್ಥ ಮಾಡಿಕೊಳ್ಳಬಾರದು, ಎಷ್ಟು ಜನ ಕಾಂಗ್ರೆಸ್‌ನವರು ಹೆಚ್ಚು ಪರ್ಮಿಟ್ ತೆಗೆದುಕೊಂಡು ಕುಡಿಯುವುದನ್ನು ಅಭ್ಯಾಸಮಾಡಿದ್ದಾರೆ ?

ಶ್ರೀ ರಾಮಕೃಷ್ಣ ಹೆಗಡೆ.—ಪರ್ಮಿಟ್ ಕೊಡುವುದಕ್ಕೆ ಒಂದು ಫಾರಂ ಇರುತ್ತದೆ. ಅದರಲ್ಲಿ ಕಾಂಗ್ರೆಸ್, ಪಿ. ಎಸ್. ಪಿ., ಸ್ವತಂತ್ರ ಎಂದು ಹೇಳುವ ಕಾನೂನು ಇಟ್ಟಿಲ್ಲ. ಅಂಥಾದ್ದು ಇಡುವ ಪ್ರಸಂಗ ಬಂದರೆ ಅದರ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗುತ್ತದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಪರ್ಮಿಟ್‌ಮೇಲೆ ಕೊಡತಕ್ಕ ಮದ್ಯದ ಬೆಲೆ ವಿಪರೀತವಾಗಿ ಆಗುತ್ತಿರುವಾಗ ಇದನ್ನು ಸರ್ಕಾರದವರು ನಿಷೇಧಮಾಡುವುದಕ್ಕೆ ಏನು ಕ್ರಮವನ್ನು ತೆಗೆದು ಕೊಂಡಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಬೆಲೆಯ ಒಂದು ವಿಷಯವೇ ಇರುವುದಿಲ್ಲ. ಕಳ್ಳ ಭಟ್ಟಿ ಸಾರಾಯಿ ತಯಾರುಮಾಡುವುದು, ಸಾಗಣಿಕೆ ಮಾಡುವುದು, ಸೇವನೆ ಮಾಡುವುದು—ಈ ಮೂರೂ ಅಪರಾಧ. ಮದ್ಯ ಸಿಕ್ಕುವುದಿಲ್ಲವೆಂದು ಹೇಳುವಕಡೆ ಕಳ್ಳಬಟ್ಟಿ ಸಾರಾಯಿಯನ್ನು ಧೈರ್ಯದಿಂದ ಸೇವನೆ ಮಾಡುತ್ತಾರೆ. ಈಗ ಅದು ಬಹಳ ಸಲಭವಾಗಿ ಸಿಗುತ್ತದೆ. ಅದು ಒಂದು ಭಟ. ಅಂತಹವರು ಹೇಗಾದರೂ ಮಾಡಿ ಕುಡಿಯುತ್ತಾರೆ. ಆದರೆ ಕಾಯದೆಗೆ ವಿರೋಧವಾಗಿ ನಡೆಯುತ್ತಿರುವುದು ಕಡಿಮೆಯಾಗಿದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಕಳ್ಳಬಟ್ಟಿ ತಯಾರುಮಾಡತಕ್ಕ ಮತ್ತು ಅದಕ್ಕೆ ಪ್ರೊಪ್ರೈಟರ್ ಆಗಿರತಕ್ಕ ಕೆಲವು ಪೋಲೀಸ್ ಅಧಿಕಾರಿಗಳು ಪರ್ಮಿಟ್ ಕೊಡುವುದಕ್ಕೆ ಅವಕಾಶ ಕೊಡುವುದಿಲ್ಲ. ಇದರಿಂದ ಅವರ ವ್ಯಾಪಾರ ನಿಂತುಹೋಗುತ್ತದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಪರ್ಮಿಟ್ ಕೊಡುವ ವಿಷಯದಲ್ಲಿ ಪೋಲೀಸ್ ಸಿಬ್ಬಂದಿಗೆ ಪರ್ಮಿಟ್ ಕೊಡುವ ಅಧಿಕಾರವನ್ನು ಕೊಟ್ಟಿಲ್ಲ. ಮಾನ್ಯ ಸದಸ್ಯರ ಹೇಳಿಕೆ ಪೋಲೀಸರಿಂದ ಈ ವಿಷಯದಲ್ಲಿ ಅತಂಕವಾಗುತ್ತವೆಂಬ ಹೇಳುವುದು ನಂಬುವುದಕ್ಕೆ ಸಾಧ್ಯವಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಮನುಷ್ಯ ಸ್ವಭಾವ ಬದಲಾವಣೆಯಾಗಬೇಕು. ಪಾನನಿರೋಧ ಸುಮಾರು 18 ವರ್ಷಗಳಿಂದಲೂ ಅಸಾಧ್ಯವಾಗಿದೆಯೆಂಬುದು ವ್ಯಕ್ತಗತವಾಗಿ ಗೊತ್ತಿದೆ. ಅಂದ ಮೇಲೆ ಸರ್ಕಾರ ಏಕೆ ಡೋಲಾಯಮಾನವಾಗಿರಬೇಕು ? ಕುಡಿತವನ್ನು ಇಂಟ್ರೋಡ್ಯೂಸ್ ಮಾಡುವುದಕ್ಕೆ ಒಪ್ಪುತ್ತದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಮನುಷ್ಯ ಸ್ವಭಾವವನ್ನು ಬದಲಾವಣೆ ಮಾಡುವುದು ಅಸಾಧ್ಯವೆಂದು ನಾನು ಹೇಳಲಲ್ಲ. ಕುಡಿತದ ಬಗ್ಗೆ ವಿಶ್ಲೇಷಣೆಮಾಡಿ ನಿರ್ಣಯಕ್ಕೆ ಬರುವುದು ಕಷ್ಟ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ವಿಷಯದಲ್ಲಿ ರೂಲ್ಸನ್ನು ರಿಲ್ಯಾಕ್ಸೇಷನ್ ಮಾಡಿದಮೇಲೆ ಸಚಿವಮಂಡಲಯಲ್ಲಿದ್ದಂಥ ಒಬ್ಬರು ರಾಜೀನಾಮೆ ಕೊಟ್ಟರು. ಆರೀತಿ ರಾಜೀನಾಮೆ ಕೊಟ್ಟ ಮೇಲೆ ಪರ್ಮಿಟ್ಟುಗಳನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದರು. ಇದಾದಮೇಲೆ ಈ ರಾಜ್ಯದಲ್ಲಿ ಕುಡಿತ ಏರಿದೆಯೋ ಅಥವಾ ಕಡಿಮೆಯಾಗಿದೆಯೋ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರ ಪ್ರಶ್ನೆ ನನಗೆ ಅರ್ಥವಾಗಲಿಲ್ಲ. ಒಬ್ಬ ಸಚಿವರ ರಾಜೀನಾಮೆ ಈ ಮಧ್ಯ ಹೇಗೆ ಬಂತೋ ನನಗೆ ಗೊತ್ತಾಗಲಿಲ್ಲ. ಪರ್ಮಿಟ್ ಕೊಡುವ ಪದ್ಧತಿ ಯಾಗಲೀ, ಇಲ್ಲಿ ಕೊಟ್ಟಿರತಕ್ಕ ಪರ್ಮಿಟ್ಟುಗಳ ಸಂಖ್ಯೆಯಾಗಲೀ ನಾವು ಹೊಸದಾಗಿ ಏನೊಂದು ರೂಲನ್ನು ಮಾಡಿದ್ದೇವೆ ಅದು ಜಾರಿಗೆ ಬಂದಮೇಲೆ ಮಾಡಿಲ್ಲ. ಅದಕ್ಕಿಂತ ಮೊದಲೇ ಪರ್ಮಿಟ್ಟು ಗಳಿದ್ದುವು. ಸರ್ಕಾರ ಮಾಡಿದ್ದೇನೆಂದರೆ, ಪರ್ಮಿಟ್ಟುಗಳನ್ನು ಕೊಡತಕ್ಕಂಥ ಪದ್ಧತಿಯಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಿದೆ. ಸ್ವಲ್ಪ ರೂಲ್ಸ್‌ನಲ್ಲಿ ರಿಲ್ಯಾಕ್ಸ್ ಮಾಡಿದ್ದೇವೆ. ಹಿಂದೆ ಬಹಳ ಕಟ್ಟುನಿಟ್ಟು ಇತ್ತು. ಆ ಕಟ್ಟುನಿಟ್ಟನ್ನು ಸ್ವಲ್ಪ ಸಡಿಲಸಿದ್ದೇವೆ. ಪರ್ಮಿಟ್ಟು ಕೊಡುವ ಪದ್ಧತಿ ಜಾರಿಗೆ ಬಂದಿರುವುದು ಹೊಸದಲ್ಲ. ಈಗಾಗಲೇ 1801 ಪರ್ಮಿಟ್ಟುಗಳನ್ನು ಕೊಟ್ಟಿದ್ದೇವೆ. ಅಂದ ಮೇಲೆ ಈಗ ನಾವು ನಿರ್ಣಯ ಕೈಗೊಂಡನಂತರ ಇದಾಗಿದ್ದು ಎಂಬುದಾಗಿ ಮಾನ್ಯ ಸದಸ್ಯರು ಹೇಳಿದರೆ ಅದು ತಪ್ಪಾಗುತ್ತದೆ.

ಶ್ರೀ ಟಿ. ಎನ್. ಮಾದಪ್ಪ ಗೌಡ.—ಮದ್ಯ ಮಾರುವುದಕ್ಕೆ ತಾಲ್ಲೂಕು ಮತ್ತು ಜಿಲ್ಲಾ ಹೆಡ್ ಕ್ವಾರ್ಟರುಗಳಲ್ಲಿ ಪರ್ಮಿಟ್ಟುಗಳನ್ನೇನೋ ಸರ್ಕಾರದವರು ಕೊಡಿಸಿದ್ದಾರೆ. ಆದರೆ ಅಲ್ಲಿ ಕುಡಿಯು ತಕ್ಕಂಥವರಿಗೆ ಬರೀ ಬಾಟಲುಗಳನ್ನು ಸಪ್ಲೈ ಮಾಡುವುದಾಗಲೀ ಅಥವಾ ಕುಡಿಯುವುದಕ್ಕೆ ಏರ್ಪಾಡುಮಾಡುವುದಾಗಲೀ ಮಾಡಲು ಏನಾದರೂ ಅವಕಾಶವನ್ನು ಮಾಡಿಕೊಟ್ಟಿದ್ದಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಎಲ್ಲೆಲ್ಲಿ ಪಾನ ಪ್ರತಿಬಂಧ ಜಾರಿಯಲ್ಲದೆಯೋ ಅಂತಹ ಕಡೆ ಗಳಲ್ಲಿ ಎರಡು ತರಹ ಅಂಗಡಿಗಳಿವೆ. ಒಂದು ಹೋಲ್‌ಸೇಲ್, ಮತ್ತೊಂದು ರಿಟೇಲ್, ರಿಟೇಲ್ ಅಂದರೆ ಅಲ್ಲಿಯೇ ಕುಳಿತುಕೊಂಡು ಬಾರ್ ಯಾವ ರೀತಿ ನಡೆಯುತ್ತಹೋ ಆ ರೀತಿ ನಡೆಸುವುದು. ಆದರೆ ರಿಟೇಲ್ ಅಂಗಡಿಗಳನ್ನು ನಡೆಸುವುದಕ್ಕೆ ಪರ್ಮಿಟ್ಟುಗಳನ್ನು ಇನ್ನೂ ಕೊಟ್ಟಿಲ್ಲ. ಹೋಲ್‌ಸೇಲ್ ಅಂದರೆ ಕೆಲವು ಕಡೆಗಳಲ್ಲಿ ಕ್ಲಬ್‌ಗಳಿರುತ್ತವೆ. ಅಂತಹ ಸಂದರ್ಭಗಳಲ್ಲಿ ಬಾರ್ ಲೈಸೆನ್ಸುಗಳನ್ನು ಮೊದಲೇ ಕೊಟ್ಟಿದ್ದೇವೆ. ಆದರೆ ಅಂಗಡಿಗಳಿಗೆ ಕೊಟ್ಟಿರುವುದು ಬಾರ್ ಲೈಸೆನ್ಸು ಅಲ್ಲ.

ಶ್ರೀ ಸಂಜೀವನಾಥ ಐಕಳ.—ಈ ಪರ್ಮಿಟ್ಟುಗಳನ್ನು ಕೊಟ್ಟನಂತರ ಹಾಗೂ ಬಾರ್‌ಗಳು ಬಂದಾದನಂತರ ಸರ್ಕಾರಕ್ಕೆ ಬರುವ ಆದಾಯ ಕಡಮೆ ಇದೆಯೆಂಬುದಾಗಿ ಪೋಲೀಸ್ ಇಲಾಖೆಯವರಿಗೆ ದೂರುಗಳು ಬಂದಿವೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಆ ವಿಚಾರ ನನಗೆ ಗೊತ್ತಿಲ್ಲ. ನಾನು ಆ ಬಗ್ಗೆ ಮಾನ್ಯ ಗೃಹ ಮಂತ್ರಿಗಳನ್ನು ವಿಚಾರಮಾಡಬೇಕಾಗಿದೆ.

ಶ್ರೀ ಬಿ. ಕೆ. ಪುಟ್ಟಯ್ಯ.—ಈಗ ಉತ್ತರದಲ್ಲಿ 17 ಜಿಲ್ಲೆಗಳನ್ನು ಕೊಟ್ಟಿದ್ದೀರಿ. ಬೇರೆ ಜಿಲ್ಲೆಗಳಿಂದ ಯಾರೂ ಅರ್ಜಿಗಳನ್ನು ಹಾಕಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲ. ಅಲ್ಲಿ ಪಾನ ಪ್ರತಿಬಂಧ ಜಾರಿಯಲ್ಲಿಲ್ಲವೆಂದು ಕಾಣುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತುಮಕೂರು ಜಿಲ್ಲೆಯಲ್ಲಿ ನಾಲ್ಕು ಹೆಲ್ತ್ ಪರ್ಮಿಟ್ಟುಗಳನ್ನು ಕೊಟ್ಟಿದ್ದಾರೆ. ನಮ್ಮ ಊರಿನಲ್ಲಿ ನಮ್ಮ ಮನೆ ಪಕ್ಕದಲ್ಲಿ ಒಬ್ಬ ಡಾಕ್ಟರ್ ಇದ್ದಾರೆ. ಅವರಿಗೆ ಆ ಊರಿನಲ್ಲಿ ಒಂದು ಹೊಸ ಕಾರನ್ನು ಕೊಟ್ಟಿದ್ದಾರೆ. ಅವರು ಕಾರಿನಲ್ಲಿ ಸೀಸೆಗಳನ್ನು ತುಂಬಿಕೊಂಡು ಬಂದು ಮಾರಾಟಮಾಡುತ್ತಿದ್ದಾರೆ. ಪೋಲೀಸಿನವರಿಗೆ ಈ ವಿಚಾರದಲ್ಲಿ ದೂರು ಕೊಟ್ಟಿದ್ದೇನೆ. ಸರ್ಕಾರಕ್ಕೂ ತಿಳಿಸಿದ್ದೇನೆ. ಅವರು ನಮ್ಮ ಊರಿನಲ್ಲಿ ಮಾರಾಟಮಾಡುವುದಕ್ಕೆ ಪೋಲೀಸ್ ಕನ್‌ವೆಯನ್ಸ್ ಉಪಯೋಗಿಸುತ್ತಿದ್ದರು. ಇನ್ನೊಬ್ಬ ಡಾಕ್ಟರ್ ನುಮಾರು 300-400 ಸೀಸೆಗಳನ್ನು ವೆಂಡಿಂಗ್ ಲೈಸನ್ಸ್ ಇಲ್ಲದೆಯೇ ಮಾರಾಟಮಾಡುತ್ತಿದ್ದರೆ ಅದು ಅಕ್ರಮವಲ್ಲವೆ ? ಅದರ ಬಗ್ಗೆ ಏನಾದರೂ ತಕ್ಕ ಕಮವನ್ನು ತೆಗೆದುಕೊಳ್ಳುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಅಂತಹ ಅಪರಾಧವಿದ್ದರೆ ಕಾಯಿದೆ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ. ಬಹುಶಃ ಈ ವಿಷಯವನ್ನು ಮಾನ್ಯ ಸದಸ್ಯರು ಪೋಲೀಸಿನವರಿಗೆ ಹೇಳಿದ್ದರೂ ಅದು ನನ್ನ ಗಮನಕ್ಕೆ ಬಂದಿಲ್ಲ. ನನ್ನ ಗಮನಕ್ಕೆ ಆ ವಿಚಾರವನ್ನು ತೆಗೆದುಕೊಂಡು ಬಂದರೆ ಕಾಯಿದೆ ಪ್ರಕಾರ ಆ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಕೃಷ್ಣಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಗೆ 76 ಪರ್ಮಿಟ್ಟುಗಳನ್ನು ಕೊಟ್ಟಿದೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಇದು ಯಾವ ತಾರೀಖಿನವರೆಗೆ ಈ ಪಟ್ಟಿ ?

ಶ್ರೀ ರಾಮಕೃಷ್ಣ ಹೆಗಡೆ.—ಉತ್ತರ ಪಡೆದಿರತಕ್ಕ ತಾರೀಖಿನವರೆಗೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಪರ್ಮಿಟ್ಟುಗಳನ್ನು ಕೊಟ್ಟಮೇಲೆ Centre of activity has changed from a Police Officer to a Doctor. ಅದು ಎಲ್ಲರಿಗೂ ವೇದ್ಯವಾಗಿದೆಯಲ್ಲವೇ ?

Sri RAMAKRISHNA HEGDE.—Centre of activity is always the consumer himself ಅದು ಡಾಕ್ಟರಿಗೋ ಅಥವಾ ಬೇರೆಯವರಿಗೋ ಹೋಗುತ್ತದೆಂದು ಹೇಳಿದರೆ ನಾನು ಒಪ್ಪುವುದಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ್.—ಈ ಹೆಲ್ತ್ ಪರ್ಮಿಟ್ಟುಗಳನ್ನು ಸಾಮಾನ್ಯ ಜನರಿಗೆ ಕೊಡದೇ ಇರುವುದರಿಂದ ಸಾಮಾನ್ಯ ಜನ ಕುಡಿಯುವವರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಅವರಿಗೂ ಒಂದೊಂದು ಪರ್ಮಿಟ್ಟುಗಳನ್ನು ಕೊಡುವುದಕ್ಕೆ ಏರ್ಪಾಡುಮಾಡುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಪಾನ ಪ್ರತಿಬಂಧ ಕಾಯಿದೆಯನ್ನು ಓದಿದರೆ ಅವರಿಗೇ ಗೊತ್ತಾಗುತ್ತದೆ. ಒಂದೇ ಒಂದು ನಂದರ್ಭದಲ್ಲಿ ಪರ್ಮಿಟ್ಟನ್ನು ಕೊಡಬಹುದು. ಅಗತ್ಯ ವಿದ್ದರೆ ಅದನ್ನು ವಿಚಾರಮಾಡಬಹುದು.

ಶ್ರೀ ಟಿ. ಮಾದಯ್ಯ ಗೌಡ.—ಹೆಲ್ತ್ ಪರ್ಮಿಟ್ ಮೇಲೆ ಸರ್ಕಾರದವರು ಮದ್ಯವನ್ನು ತಿಂಗಳಿಗಾಗುವಷ್ಟು ಕೊಡುತ್ತಾರೆ. ತೆಗೆದುಕೊಂಡು ಹೋಗುವವನು ತಿಂಗಳಿಗೆ ಎಷ್ಟು ಬೇಕೋ ಅಷ್ಟು ತೆಗೆದುಕೊಳ್ಳುತ್ತಾನೆ. ಒಂದುಮೇಳೆ ಆತ ತೆಗೆದುಕೊಂಡು ಹೋಗಿ ತನಗೆ ಬೇಕಾದವರಿಗೆ ಅಥವಾ ತನ್ನ ಮನೆಯವರಿಗೋ ಅಥವಾ ಸ್ನೇಹಿತರಿಗೋ ಹಂಚಿ ಮಿಕ್ಕುದನ್ನು ಆತ ಹೆಚ್ಚು ಕುಡಿದುಬೇಗ ಅದು ತೀರಿಹೋದರೆ ಬಾಕಿ ದಿನಗಳಿಗೆ ಏನಾದರೂ ಸ್ಪಷ್ಟರ್ಲಾಗಿ ಪರ್ಮಿಟ್ಟು ಕೊಡುತ್ತಾರೆಯೇ ? ಇಲ್ಲದೇ ಹೋದರೆ ಅವರು ಕಳ್ಳಬಟ್ಟಿ ಸಾರಾಯಿಯನ್ನು ಕೊಂಡುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಅಂಥಾದ್ದನ್ನು ತಡೆಹಿಡಿಯುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಅಗತ್ಯ ಬಿದ್ದಾಗ ಹೆಚ್ಚುಮಾಡುವ ವಿಚಾರವನ್ನು ಪರಿಶೀಲಿಸಲಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ತುಮಕೂರು ಜಿಲ್ಲೆಗೆ ನಾಲ್ಕು ಪರ್ಮಿಟ್ಟುಗಳನ್ನು ಕೊಟ್ಟಿದ್ದಾರೆ. ಎಷ್ಟೋ ಜನ ಅಲ್ಲಿ ಪರ್ಮಿಟ್ಟುಗಳಿಗೆ ಹಾಕಿದ್ದರೂ, ತಾರತಮ್ಯ ತೋರಿಸಿರುವುದರಿಂದ ತುಮಕೂರು ಜಿಲ್ಲೆಗೆ ಒಂದು ರೀತಿಯಲ್ಲಿ ಅವಮಾನಮಾಡಿದಂತಾಗುವುದಿಲ್ಲವೇ ? ಆದ್ದರಿಂದ ಬಾಕಿಯವರಿಗೂ ಅಲ್ಲಿ ಪರ್ಮಿಟ್ಟುಗಳನ್ನು ಕೊಡುವುದಕ್ಕೆ ಪ್ರಯತ್ನಮಾಡುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಎಷ್ಟು ಜನರು ಅಲ್ಲಿ ಹಾಕಿದ್ದಾರೋ ಅಷ್ಟು ಜನರಿಗೂ ಪರ್ಮಿಟ್ಟು ಗಳನ್ನು ಕೊಟ್ಟಿದೆ. ಮಾನ್ಯ ಸದಸ್ಯರು ಇಂಥಿಂಥವರಿಗೆ ಕೊಡಿಸಬೇಕೆಂದು ಹೇಳಿದರೆ ನನಗೆ ಹೆಸರುಗಳನ್ನು ಕೊಡಲಿ. 777 ಪರ್ಮಿಟ್ಟುಗಳನ್ನು ಕೊಡಲು ಜಲ್ಲೆಗೆ ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಒಂದು ಸಾವಿರ ಜನರ ಪಟ್ಟಿ ತೆಗೆದುಕೊಂಡು ಬಂದು ಕಾಯಿದೆ ಪ್ರಕಾರ ಹೆರ್ತ್ ಸರ್ಟಿಫಿ ಕೇಟ್, ಅರ್ಹತೆ ಅವರು ಪಡೆದಿದ್ದರೆ ಅಂತಹವರಿಗೂ ಕೊಡಿಸುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಈಗತಾನೆ ಅಪ್ಪಣೆ ಕೊಡಿಸಿದಿರಿ ಕಾನೂನು ಉಲ್ಲಂಘನೆ ಮಾಡಿದವರ ಮೇಲೆ ಕಾಯಿದೆ ಪ್ರಕಾರ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು. ಈಗ ನಮ್ಮ ಊರಿನಲ್ಲಿ ನಮ್ಮ ಮನೆ ಪಕ್ಕದಲ್ಲಿ ಒಬ್ಬರು ಡಾಕ್ಟರು ವಾಸವಾಗಿದ್ದಾರೆ. ಅವರ ಹೆಂಡತಿ ಸೋಷಿ ಯರ್ ವೆಲ್‌ಫೇರ್ ಬೋರ್ಡಿನ ಚೇರ್ಮನ್ ಆಗಿದ್ದಾರೆ. ಅವರು ಸರ್ಕಾರದವರು ಕೊಟ್ಟಿರುವ ಸವಲತ್ತನ್ನು ದುರುಪಯೋಗ ಮಾಡಿಕೊಂಡು ಅವರ ಮನೆಯಲ್ಲಿ ಹೆಂಡವ ವ್ಯಾಪಾರವನ್ನು ಮಾಡು ತ್ತಿದ್ದಾರೆ. ಅದು ಕಾನೂನು ಉಲ್ಲಂಘನೆ ಆಗುತ್ತದೆ. ಆದ್ದರಿಂದ ಸರ್ಕಾರದವರು ಅವರ ಮೇಲೆ ಶೀಘ್ರವಾಗಿ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

9-00 A.M.

ಶ್ರೀ ರಾಮಕೃಷ್ಣ ಹೆಗಡೆ.—ಯೋಗ್ಯವಾದ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈಗ ಜನಗಳಲ್ಲಿ ಕುಡಿತ ಜಾಸ್ತಿಯಾಗುತ್ತಿದೆ. ಕೆಲವರು ಸಮಾಜಕ್ಕೆ ಹೆದರಿ ಪರ್ಮಿಟ್ ತೆಗೆದುಕೊಳ್ಳುವುದಿಲ್ಲ. ಅಂಥಾ ಸಂದರ್ಭದಲ್ಲಿ ಹಳ್ಳಿಯಲ್ಲಿ ಜನಗಳು ಕುಡಿದರೂ ಕೂಡ ಅವರ ಮೇಲೆ ಕೇಸು ಹಾಕಬೇಡಿ ಎಂದು ಪೋಲೀಸಿನವರಿಗೇನಾದರೂ ಆದೇಶ ವನ್ನು ಕೊಟ್ಟಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಪೋಲೀಸಿನವರಿಗೆ ಅಂಥಾ ಆದೇಶವನ್ನು ಕೊಟ್ಟಿಲ್ಲ. ಕಾಯಿದೆಗೆ ವ್ಯತಿರಿಕ್ತವಾಗಿ ಯಾರೇ ಆಗಲೀ ಎಲ್ಲೇ ಆಗಲೀ ವ್ಯವಹಾರವನ್ನು ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಸಮಾಜಕ್ಕೆ ಹೆದರಿ ಲೈಸೆನ್ಸ್ ತೆಗೆದುಕೊಳ್ಳದೆ ಇದ್ದರೆ, ಅವರು ಸಮಾಜಕ್ಕೆ ಹೆದರಿ ಕುಡಿತವನ್ನು ಬಿಡಬೇಕು.

ಶ್ರೀ ಟಿ. ಮಾದಯ್ಯ ಗೌಡ.—ಬೆಂಗಳೂರು ಜಿಲ್ಲೆಯಲ್ಲಿ ರಾಮನಗರದಲ್ಲಿ ಇಬ್ಬರಿಗೆ ಲೈಸೆನ್ಸ್ ಕೊಟ್ಟಿದ್ದೀರಿ; ಚನ್ನಪಟ್ಟಣದಲ್ಲಿ ಇಬ್ಬರಿಗೆ ಲೈಸೆನ್ಸ್ ಕೊಟ್ಟಿದ್ದೀರಿ, ಆ ಅಂಗಡಿಯವರನ್ನು ಬಿಟ್ಟರೆ ಬೇರೆ ಯಾವ ಅಂಗಡಿಗೂ ಲೈಸೆನ್ಸ್ ಕೊಟ್ಟಿಲ್ಲ, ಇದಕ್ಕೆ ಕಾರಣವೇನು ?

ಶ್ರೀ ರಾಮಕೃಷ್ಣ ಹೆಗಡೆ.—ಈಗ ಅಂಗಡಿಗಳಿಗೆ ಲೈಸೆನ್ಸ್ ಕೊಟ್ಟಿರುವುದು ಸಾಮಾನ್ಯವಾಗಿ ಜನಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ಕೊಟ್ಟಿದೆ. ಮುತ್ತೆ ಹೆಚ್ಚು ಅಂಗಡಿಗಳಿಗೆ ಪರ್ಮಿಟ್ ಕೊಡುವ ವಿಷಯವನ್ನು ಮುಂದಿನ ವರ್ಷ ಆಲೋಚನೆ ಮಾಡುತ್ತೇವೆ. ಪ್ರತಿಯೊಂದು ತಾಲ್ಲೂಕಿಗೂ ಈಗ ಎಷ್ಟು ಅಂಗಡಿಗಳಿಗೆ ಲೈಸೆನ್ಸ್ ಕೊಟ್ಟಿದ್ದೇವೆ, ಆಯಾ ತಾಲ್ಲೂಕಿನಲ್ಲಿ ಎಷ್ಟು ಜನಸಂಖ್ಯೆ ಇದೆ, ಕುಡಿಯುವವರ ಸಂಖ್ಯೆ ಎಷ್ಟು ಇದೆ, ಎಷ್ಟು ಅಂಗಡಿಗಳಿಗೆ ಲೈಸೆನ್ಸ್ ಕೊಡಬೇಕು, ಎನ್ನುವುದು ಒಂದು ವರ್ಷದಲ್ಲಿ ನಮಗೆ ಅನುಭವ ಬರುತ್ತದೆ. ಅದನ್ನು ನೋಡಿಕೊಂಡು ಮುಂದಿನ ವರ್ಷ ಆಲೋಚನೆ ಮಾಡುತ್ತೇವೆ ಎಷ್ಟು ಅಂಗಡಿಗಳಿಗೆ ಲೈಸೆನ್ಸ್ ಕೊಡಬೇಕು ಎಂಬುದನ್ನು.

ಶ್ರೀ ಕೆ. ಲಕ್ಕಪ್ಪ.—ಎಲ್ಲಾ ಜಿಲ್ಲೆಗಳಲ್ಲಿಯೂ ಕ್ಲಬ್ಬುಗಳನ್ನು ಮಾಡಿಕೊಂಡರೆ ಕುಡಿಯುವುದಕ್ಕೆ ಲೈಸೆನ್ಸ್ ಕೊಡುವುದನ್ನು ಯೋಚನೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಕೆಲವು ಕ್ಲಬ್ಬುಗಳಿಗೆ ಲೈಸೆನ್ಸ್ ಕೊಟ್ಟಿದ್ದೇವೆ. ಕ್ಲಬ್ಬುಗಳಿಗೆ ಲೈಸೆನ್ಸ್ ಕೊಡುವುದು ಅವು ಯಾವ ತತ್ವವ ಮೇಲೆ ಕೆಲಸ ಮಾಡುತ್ತವೆ, ಅಲ್ಲಿ ಯಾವ ತರಹ ಸದಸ್ಯರು ಇರುತ್ತಾರೆ ಎಂಬುದನ್ನು ಅವಲಂಬಿಸಿದೆ.

Sri S. M. KRISHNA.—How much progress has the State Government made towards taking a decision of either scrapping the prohibition completely or bringing about the prohibition throughout the length and breadth of the State ?

Sri RAMAKRISHNA HEGDE.—Though the question is not relevant to the main question, Sir, I would like to say that it is still under consideration.

ಶ್ರೀ ಟಿ. ಡಿ. ದೇವೇಂದ್ರಪ್ಪ.—ನಂದಿ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿರುವ ಕೆಲವು ಟೂರಿಸ್ಟ್ ಸೆಂಟರುಗಳಲ್ಲಿ ಲೈಸೆನ್ಸ್ ಇಲ್ಲದೆ ಹೇರಳವಾಗಿ ಮದ್ಯಪಾನ ಮಾಡಬಹುದು ಎಂದು ಕೆಲವು ದಿವಸಗಳ ಹಿಂದೆ ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಅದು ನಿಜವೇ ಹೇಗೆ ಎಂಬುದನ್ನು ತಿಳಿಸುತ್ತೀರಾ ?

Sri RAMAKRISHNA HEGDE.—That requires a separate question.

Sri SANJEEVANATH AIKALA.—Are the Government thinking that women should also get health permits and are there any women permit holders ?

Sri RAMAKRISHNA HEGDE.—I can assure the member that there would be no discrimination on the basis of sex.

Water Allowance to the staff working in Mundgod and Haliyal Taluks.

*Q.—674. Sri S. P. PHAYADE (Ankola).—

Will the Minister for Finance be pleased to state :—

(*a*) whether it is a fact that Government have sanctioned Water Allowance to their staff working in Mundgod and Haliyal Taluks in North Kanara District due to Scarcity of drinking water in that area ;

(*b*) whether it is also a fact that water allowance is not paid regularly for all Government Officials working there ;

(*c*) when the said allowance would be paid to those officials to whom it is not paid ?

A.—Sri RAMAKRISHNA HEGDE (Minister for Finance).—

(*a*) According to the orders issued by Ex-Bombay Government Low-Paid Government Servants drawing pay of less than Rs. 200 p.m. stationed at so-called dry areas of Bombay Karnatak region inclusive of Haliyal and Mundgod were being paid water allowance at certain rates during the 3 or 4 summer months each year and this concession was being allowed to them till the issue of the Government Order No. FD 57 SRP (1) 63, dated 18th October 1963 regarding rationalization of allowances. In this Government Order it was ordered that the procedure of paying Water Allowance to the officials in the so-called scarcity areas of the State should be discontinued in view of the fact that the conditions there had changed materially—*Vide* Para 4 of Section 'B' of the Government Order. In view of the above orders payment of Water Allowance to the Government Servants stationed in the dry or scarcity areas inclusive of Haliyal and Mundgod in North Kanara District has been discontinued from the year 1964.

(*b*) As stated earlier in view of the orders issued in Government order dated 18th October 1963 Water Allowance is not being paid to any of the officials stationed at Haliyal and Mundgod from the year 1964.